**ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕ: 09-02-2024**

**ದಾಖಲೆಗಳನ್ನು ಗುರುತಿಸುವುದಕ್ಕಾಗಿ ಮುಖ್ಯ ವಿಚಾರಣೆ: ಪ್ರತಿವಾದಿ ನಂ.2 ರ ಪರ ಶ್ರೀ. ವಿ ಎನ್ ಪಿ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ನನಗೆ ಗೋತ್ತಿದ್ದು, ಅವುಗಳು ಸತ್ಯವಾಗಿವೆ ಮತ್ತು ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ.

1. ಸಾಕ್ಷಿಯು ತನ್ನ ಸಹಿಯನ್ನು ನಿಡಿ.24 ರಲ್ಲಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಡಿ.24(ಬಿ) ಅಂತಾ ಗುರುತಿಸಲಾಯಿತು.
2. ಸಾಕ್ಷಿಯು ತನ್ನ ತಂದೆ ನಿಡಿ.23 ರಲ್ಲಿ ಸಹಿಯನ್ನು ಮಾಡಿದ್ದಾರೆ ಎಂದು ನಿಡಿ.23 ರಲ್ಲಿ ಗುರುತಿಸಿದ್ದು ಸಾಕ್ಷಿಯ ತಂದೆಯ ಸಹಿಯನ್ನು ನಿಡಿ.23(ಎ) ಅಂತಾ ಗುರುತಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ.ಆರ್ ಆರ್ ಕೆ ವಕೀಲರಿಂದ:**

ನಾನು ಹಾಗೂ ಪ್ರತಿವಾದಿ ನಂ.2 ಮತ್ತು ಇನ್ನೊಬ್ಬ ಸಾಕ್ಷಿದಾರರಾದ ನಾಗರಾಜರಾದ (ಡಿಡಬ್ಲು-3) ಸ್ನೇಹಿತರು ಎಂದರೆ ನಿಜ. ಪ್ರತಿವಾದಿ ನಂ.2 ರವರು ಬಹಳ ವರ್ಷಗಳಿಂದ ಹುಬ್ಬಳ್ಳಿಯಲ್ಲಿ ವಾಸ ಇದ್ದಾರೆ ಎಂದರೆ ನಿಜ. ಅವರ ತಂದೆ ಜೀವಂತ ಕಾಲದಲ್ಲಿ ಮನೆತನದ ವ್ಯವಹಾರಗಳನ್ನು ಪ್ರತಿವಾದಿ ನಂ.2 ರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವಾದಿ ಹಾಗೂ ಪ್ರತಿವಾದಿ ನಂ.5 ರವರು ಹೊಲದಲ್ಲಿ ಕೆಲಸ ಮಾಡುತ್ತಿದ್ದರು ಪ್ರತಿವಾದಿ ನಂ.2 ರವರು ವಾರಕ್ಕೊಮ್ಮೆ ಊರಿಗೆ ಬಂದು ಅವರಿಗೆ ಬೇಕಾದ ಒಕ್ಕಲುತನದ ಸಾಮಗ್ರಿಗಳನ್ನು ಕೊಡಿಸಿ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಪ್ರತಿವಾದಿಗಳ ಕುಟುಂಬದ ಒಟ್ಟು ಆಸ್ತಿಗಳ ಬಗ್ಗೆ ಗೊತ್ತಿಲ್ಲ ಆದರೆ ಕೆಲವು ಆಸ್ತಿಗಳ ಬಗ್ಗೆ ಗೊತ್ತು. ನನಗೆ ಆರ್. ಎಸ್ ನಂ.82/2 ರ ಕುರಿತು ಗೊತ್ತು. ಪ್ರತಿವಾದಿ ನಂ.2 ರವರು ಆರ ಎಸ್ ನಂ.82/2

ಆಸ್ತಿಯನ್ನು ಮಧು ಕುಲಕರ್ಣಿ ರವರಿಂದ ಖರೀದಿ ಮಾಡಿದ್ದರು. ನಾನು ವಾದಿ ಪ್ರತಿವಾದಿಗಳ ತಂದೆ ಮಲ್ಲಪ್ಪ, ಯಲ್ಲಪ್ಪ ಕಾಶಟ್ಟಿ ಮತ್ತು ಪ್ರತಿವಾದಿ ನಂ.2 ರವರು ಮುಂಬೈಗೆ ಖರೀದಿ ಮಾತುಕತೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಮತ್ತು ಪ್ರತಿವಾದಿ ನಂ.2 ರವರು ಹೋಗಿದ್ದೆವು ಎಂದು ಹೇಳುತ್ತಾರೆ.

2. ನನಗೆ ವಾದಿ ಹಾಗೂ ಪ್ರತಿವಾದಿಗಳ ಮನೆತನದ ಪೂರ್ಣ ಮಾಹಿತಿ ಇಲ್ಲ. ಪ್ರತಿವಾದಿ ನಂ.2 ಮತ್ತು 3 ರವರು ಹುಬ್ಬಳ್ಳಿಯಲ್ಲಿ ವಾಸಇರುತ್ತಾರೆ. ವಾದಿ ಮತ್ತು ಪ್ರತಿವಾದಿ ನಂ.5 ರವರು ಕಳಮಳಗಿ ಗ್ರಾಮದಲ್ಲಿ ವಾಸ ಇರುತ್ತಾರೆ. ವಾದಿ ಮತ್ತು ಪ್ರತಿವಾದಿ ನಂ.5 ರವರಿಗೆ ಒಕ್ಕಲುತನ ಬಿಟ್ಟು ಬೇರೆ ಏನು ಕೆಲಸ ಗೊತ್ತಿಲ್ಲ ಎಂದರೆ ನಿಜ. ಪ್ರತಿವಾದಿ ನಂ.5 ಮತ್ತು ವಾದಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ನಿಜ. ವಾದಿ ಹಾಗೂ ಪ್ರತಿವಾದಿಗಳ ನಡುವೆ ಇವತ್ತಿನವರೆಗೆ ಅವರ ಕುಟುಂಬದ ಆಸ್ತಿಗಳಲ್ಲಿ ಪಾಲು ಆಗಿರುವುದನ್ನು ನಾನು ನೋಡಿಲ್ಲ. ಆರ ಎಸ್ ನಂ.82/2 ರ ಕಬ್ಬು ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಹೋಗುತ್ತಿತ್ತು. ಉಳಿದ ಜಮೀನಿನ ಕಬ್ಬು ಬೆಳೆ ಯಾರ ಹೆಸರಿನಲ್ಲಿ ಹೋಗುತ್ತಿತ್ತು ನನಗೆ ಗೊತ್ತಿಲ್ಲ. ನನಗೆ ಸದರಿ ಜಮೀನುಗಳಿಂದ ಎಷ್ಟು ಉತ್ಪನ್ನ ಇತ್ತು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರಿಗೆ ಯಾವ ಮೂಲದಿಂದ ಎಷ್ಟು ಉತ್ಪನ್ನ ಇತ್ತು ಎಂದು ಹೇಳಲು ಬರುವುದಿಲ್ಲ. ಪ್ರತಿವಾದಿ ನಂ.2 ರವರು ಖರೀದಿ ಮಾಡಲು ಹಣವನ್ನು ಎಲ್ಲಿಂದ ತಂದಿದ್ದರು ನನಗೆ ಗೊತ್ತಿಲ್ಲ. ಎಲ್ಲಾ ಜಮೀನುಗಳನ್ನು ಪ್ರತಿವಾದಿ ನಂ.5 ಮತ್ತು ವಾದಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಪ್ರತಿವಾದಿ ನಂ.2 ರವರು

ಸರ್ವೆ ನಂ.82/2 ಸಾಗುವಳಿ ಮಾಡುತ್ತಿದ್ದರು ಬೇರೆ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿ ನಂ.5 ರವರು ಮಾಡಿಕೊಳ್ಳುತ್ತಿದ್ದಿರಬಹುದು. ಸರ್ವೆ ನಂ.82/2 ಜಮೀನನ್ನು ಪ್ರತಿವಾದಿ ನಂ.2 ರವರು ಸಾಗುವಳಿ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸರ್ವೆ ನಂ.82/3 ಜಮೀನನ್ನು ಪ್ರತಿವಾದಿ ನಂ.2 ರವರು ಮಧು ಕುಲಕರ್ಣಿ ರವರಿಂದ ಖರೀದಿ ಮಾಡಿದ್ದರು, ಸುಮಾರು 1,50,000/- ಚಿಲ್ಲರೆ ಹಣಕ್ಕೆ ಖರೀದಿ ಮಾಡಿದ್ದರು ನಿಖರವಾಗಿ ಗೊತ್ತಿಲ್ಲ. ಖರೀದಿ ಪತ್ರಕ್ಕೆ ಎಷ್ಟು ಜನ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಸಹಿ ಮಾಡಲು ಕಳುಹಿಸಿದ್ದೆ ಎಂದು ಹೇಳುತ್ತಾರೆ. ಸದರಿ ಜಮೀನು ಖರೀದಿಸಲು ಹಣ ಎಲ್ಲಿಂದ ಬಂದಿತ್ತು ನನಗೆ ಗೊತ್ತಿಲ್ಲ. ಸರ್ವೆ ನಂ.44/2 ಮತ್ತು 210 ಜಮೀನುಗಳನ್ನು ಪ್ರತಿವಾದಿ ನಂ.2 ರವರು ಖರೀದಿಸಿದ್ದರು ಎಷ್ಟು ಹಣಕ್ಕೆ, ಯಾವಾಗ, ಯಾರಿಂದ ಖರೀದಿಸಿದ್ದರು ಎಂದು ಗೊತ್ತಿಲ್ಲ ಅದನ್ನು ಮೊದಲೆ ಖರೀದಿಸಲಾಗಿತ್ತು. ವಾದಿ ಹಾಗೂ ಪ್ರತಿವಾದಿಗಳು ಬೇರೆ ಆಗಿರುವ ಮಾಹಿತಿ ನನಗೆ ಗೊತ್ತಿಲ್ಲ. ನನಗೆ ಪ್ರತಿವಾದಿ ನಂ.2 ಹಾಗೂ ಅವರ ಹೆಂಡತಿಯ ಆದಾಯ ಎಷ್ಟು ಇತ್ತು ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ನಂ.5 ರವರು ಕಬ್ಬು ಬೆಳೆಯನ್ನು ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಕಳುಹಿಸಿದ್ದು ಅದರ ಆದಾಯದಿಂದ ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಸರ್ವೆ ನಂ.82/2 ಮತ್ತು 82/3 ಆಸ್ತಿಗಳನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ

ಕುಟುಂಬದ ಜವಾಬ್ದಾರಿಯನ್ನು ಪ್ರತಿವಾದಿ ನಂ.2 ರವರು ವಹಿಸಿ ಅವರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

4. ಪ್ರತಿವಾದಿ ನಂ.2 ರವರು ಒಟ್ಟು ಕುಟುಂಬದ ಆದಾಯದ ಹಣದಿಂದ ಹುಬ್ಬಳ್ಳಿಯಲ್ಲಿ ಜಾಗವನ್ನು ಖರೀದಿಸಿ ಅದರಲ್ಲಿ ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆದಾಯದಿಂದ ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಕೆಲವು ದಾವಾ ಆಸ್ತಿಗಳನ್ನು ಖರೀದಿಸಿರುವ ವಿಚಾರ ನನಗೆ ಗೊತ್ತಿದ್ದು ನಾನು ಪ್ರತಿವಾದಿ ನಂ.2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ನಂ.3 ಪರ ವಕೀಲರು ವಾದಿ ಪರ ವಕೀಲರು ಕೇಳಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು)**

**<u>ಮರು ವಿಚಾರಣೆಃ ಇಲ್ಲ.</u>**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**
**ಖಾನಾಪೂರ**